ಒಂದಾಣೆ ಮಾಲೆ 290

ಭಕ್ತ ಶಬರ

(ಯಕ್ಷಗಾನ)

❋

ರಚಯಿತ:

ಉಳ್ತೂರು ತಮ್ಮಯ್ಯ ಪಾಟಾಳಿ, ಉಳ್ತೂರು.

❋

1960

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1960ನೇ ದಶಂಬರ್ ತಿಂಗಳ ಮೊದಲನೆಯ ವಾರದ ವರೆಗೆ 290 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

290 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 6038 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

ಭಕ್ತ ಶಬರ

(ಯಕ್ಷಗಾನ)

ಪಾತ್ರಗಳು: ಸಿಂಹಕೇತ, ಚಾಕರ, ಶಬರ, ಶಬರಿ, ಶಿವ, ಪಾರ್ವತಿ, ನಾರದ.

॥ ವಾರ್ಧಕ ॥

ಗುರು, ಗಣಪ, ಗೌರಿ, ಶಾರದೆ, ಸಿರಿಯರಸಿಗೆರಗಿ । ಹರಿ, ಹರ, ಹಿರಣ್ಯಗರ್ಭರಿಗೆ ಬಲವಂದು ದಿನ । ಕರ, ಸೋಮ ಮುಖ್ಯನವಗ್ರಹಗಳಿಗೆ ತಲೆವಾಗಿ ಸಪ್ತರ್ಷಿಗಳಿಗೆ ಮಣಿದು ॥ ಧರೆಯೊಳವತರಿಸಿರುವ ಪೂಜ್ಯರಿಗೆ ಕರಮುಗಿದು । ಪರಮ ಕಾವ್ಯರ್ಷಿ ವಾಲ್ಮೀಕಿ, ವೇದವ್ಯಾಸ । ವರಕಾಳಿದಾಸಾದಿ ಕವಿ, ಪಂಪ, ರನ್ನರಿಗೆ ಮಣಿಯುವೆನು ಭಕ್ತಿಯಿಂದ ॥ ೧ ॥
ಧರೆಯೆ ರಥ, ದಿನಕರೇಂದುಗಳೆ ಗಾಲಿಗಳು ಸುರು । ಚಿರ ಕನಕಶೈಲವೆ ಧನುಸ್ಸು, ನಭಚುಂಬಿ ಮಂ । ದರಗಿರಿಯೆ ಬತ್ತಳಿಕೆ ನಾರಾಯಣನೆ ಶರ ಚತುರ್ವೇದಗಳೆ ಹಯಗಳು ॥ ಧರಣಿಧರನೆ ರಜ್ಜು, ಅಜನೆ ಸಾರಥಿಯಾಗೆ। ಧುರದೊಳಾ ತ್ರಿಪುರಾಸುರರ ಗೆಲಿದೆ ಪರಶಿವನೆ। ಕರುಣಾಕರನೆ । ಓಂ ನಮ ಶ್ಶಿವಾಯ ! ಪಿನಾಕಪಾಣಿ ಉಳ್ಳೂರೀಶ್ವರ ॥ ೨ ॥

॥ ಭಾಮಿನಿ ॥

ಧಾರಿಣಿಯೊಳತ್ಯಂತ ಪೂರ್ವದಿ । ಚಾರು ಪಾಂಚಾಲವನು ವಿಭವದಿ । ಧೀರನೃಪ ಪರಿಪಾಲಿಸುತ್ತಿದ್ದನು ಮುದದಿ ಸುಖದಿ ॥ ತೋರುತಿರೆ ಹೊಸ ಸಗ್ಗದಂದದಿ । ಏರುತಿರೆ ಸತ್ಕೀರ್ತಿ ವಾರುಧಿ । ಭೂರಿ ಮೆರೆದನು ಸಿಂಹಕೇತನು ತನ್ನ ದೊರೆತನದಿ ॥ ೧ ॥

॥ ಕಂದ ॥

ಹರ್ಷದಿ ಸುಗ್ಗಿಯನೆಲ್ಲೆಡೆ | ದರ್ಶಿಸುತಿರೆ ಭೂಲಲಾಮನೊಂದಿನ ಕಣ್ಗೊಳ್ ॥ ವರ್ಷಿಸುತಶ್ರುವ ಹೃದಯ | ಸ್ಪರ್ಶಿ ನುಡಿಯ ಚಾರಕ ನೆರಗುತಲಾಗೆಂದಂ ॥ ೧ ॥

॥ ರಾಗ: ಬೇಗಡೆ; ಏಕತಾಳ ॥

ಭೂವರನೆ ಅವಧರಿಸು ನುಡಿಗಳನು | ಪಾಂಚಾಲರಾಜ್ಯವ | ಕಾವ ದೀನದಯಾಳು ಮಣಿಯುವೆನು ॥ ಈವರೆಗೆ ಧರೆಗಿಳಿದ ಸಗ್ಗದ | ತಾವಿನೊಲು ಈ ನಾಡಿರಲು ಮೃಗ | ಹಾವಳಿಗೆ ತುತ್ತಾಗಿಹುದು ಸಿಂ | ಹಾವಳಿಯ ಮಯವಾಗಿ ತೋರ್ಪುದು ॥ ೧ ॥ ಉಸುರಲೇನವುಗಳ ಉಪದ್ರವನು | ಬಣ್ಣಿಸಲಸಾಧ್ಯವು | ನಿಶೆಯೊಳತಿ ಬಾಧಿಪವು ಪ್ರಜೆಗಳನು ॥ ಅಸಮಸಾಹಸಿ ನೀವು ನಾಶವ | ನೆಸಗದಿರಲಾ ಪೈರುಪಚ್ಚೆಯು | ಹೆಸರಡಗಿ ಹೋಗುತಲಿ ಜನರಿಗೆ | ಅಶನವಸನವಕ್ಕಡ್ಡಿ ಬರುವುದು ॥ ೨ ॥

॥ ರಾಗ: ಘಂಟಾರವ; ಅಷ್ಟತಾಳ ॥

ಸಿಂಹನಾದವಮಾಡಿ ರೋಷದಿ | ಸಿಂಹಕೇತುವು ದುಷ್ಟಮೃಗಗಳ | ಸಂಹರಿಸುವೆನು ಎನ್ನುತ ॥ ೧ ॥ ಕಂಡುಕೊಂಡೆನು ಕಾಡಿನ ಮೃಗಗಳ | ದಂಡು ಮುತ್ತಿಗೆಯನ್ನು ಹಾಕಿದೆ | ಹಿಂಡುಗಟ್ಟಲೆ ರಾಜ್ಯದಿ ॥ ೨ ॥ ಕೂಟದಿಂದಲಿ ಕೂಡುತ ನಾ ಮೃಗ | ಬೇಟೆಯಾಡುವೆ ಪ್ರಜೆಗಳಿಗೆ ಸುಖ | ದೂಟ ಸೆದೆಯನ್ನೆರೆಯುವೆ ॥ ೩ ॥

॥ ವಾರ್ಧಕ ॥

ಧುರಪರಾಕ್ರಮಿ ಸಿಂಹಕೇತು ದೊರೆ ಹೂಂಕರಿಸಿ | ಭರದಿ ಮೃಗಬೇಟೆಯನಾಡಲಿಕೆ ನಿಶ್ಚಯಿಸಿ | ಚರರ ಮೂಲಕ ಮಿತ್ರ ಶಬರನಿಗೆ ಆಗಮಿಸುವಂತೆ ಸುದ್ದಿಯನು ತಿಳಿಸಿ ॥ ಹರಿವಿಷ್ಟರದೊಳೇರಿ ಕುಳಿತಿರೆ ಜನಂಮೆರಸಿ | ಅರಿತು ಶಬರನು ಬೇಡಪಡೆಯನ್ನು ಹಿಂದಿರಿಸಿ | ಶರವೇಗದಿಂ ರಾಜಸ್ಥಾನ ಸೇರಿದನು ಸಕಲಾಯುಧಗಳ ಧರಿಸಿ ॥ ೧ ॥

|| ರಾಗ: ಮಾರವಿ. ಏಕತಾಳ ||

ಆಗ ಕಿರಾತನು ಧರಣಿಪನಿಗೆ ತಲೆ । ಬಾಗುತ ಮುದದಿಂದ || ಹೇ ಗುಣನಿಧಿ ಮೃಗಬೇಟೆಗೆ ಹೊರಡುವ । ಈಗಲೆ ಎಂದೆಂದ || ೧ || ತರತರ ಆಯುಧಗಡಣ ತರಂಗದಿ । ಪೊರೆವುದು ವ್ಯಾಧಾಬ್ಧಿ || ವರಸುಖ ಸುಧೆಯನು ಮೃಗಗಳಾ ಮಥನದಿ । ತರಲಿಕೆ ಕರುಣಾಬ್ಧಿ || ೨ || ದುಷ್ಟ ಮೃಗಗಳಾಯುಷ್ಯದ ರೇಖೆಗ । ಳೆಷ್ಟಿದ್ದರೆ ಏನು || ದೃಷ್ಟಿಗೆ ಬಿದ್ದರೆ ಕಷ್ಟ ಕಳೆವ ಶರ । ವೃಷ್ಟಿ ಸುರಿಸಿ ನಾನು || ೩ ||

|| ದ್ವಿಪದಿ ||

ಸಂತಸದ ಮುನ್ನೀರಿನಲಿ ನೃಪನು ಮುಳುಗಿ । ಹೊಂತಗಾರರ ಕೂಡಿ ನಡೆದ ವನ ಬೆಳಗಿ || ೧ || ಬಿಲ್ಲೋಜ ಬೇಡಪಡೆ ತೆರಳಿ ಎಲ್ಲೆಡೆಗೆ । ಕೊಲ್ಲತೊಡಗಿತು ಪ್ರಾಣಿಗಳನು ಅಡಿಗಡಿಗೆ || ೨ ||

|| ರಾಗ: ಜಿಂಜೋಟಿ. ಅಷ್ಟತಾಳ ||

ಆಡುತಾಡುತ ಬಂದರಾಗ । ಬೇಟೆ । ಯಾಡುತಾಡುತ ಬಂದರಾಗ || ಕಾಡಿನ ಮಧ್ಯದಿ ಮೃಗಗಳ ಸೇನೆಯು । ನೋಡಿ ಬಲೆಯನು ಬೀಸಿ ಶಿರ ಚೆಂ । ಡಾಡುತಲಿ ಆಯುಧಗಳಿಂದಲಿ || ಆಡು || ೧ || ಕಂಗೊಳಿಸುವ ಹುಲ್ಲೆಗಳನು । ಚೆಲು । ಹೊಂಗೋಡುಗಳ ಕೋಣಗಳನು || ಸಿಂಗ ಶರಭ ಹಸ್ತಿ ಮುಂತಾದ ದುಷ್ಟಮೃ । ಗಂಗಳನು ಕೊಲ್ಲುತ ರಕ್ತದ । ಮಂಗಳೋಕುಳಿಯಲ್ಲಿ ಮೀಯುತ || ಆಡು || ೨ ||

|| ಆರ್ಯ ಸವಾಯ್ ||

ಮೃಗಬೇಟೆಯನಾಡುತ ಬರುತಿರೆ ಬಹು । ಸೊಗಯಿಪ ದೇವಾಲಯ ವೊಂದು || ಬಗೆಸೆಳೆಯಲು ಶಬರನು ನುಡಿದನು ನೃಪ । ನಿಗೆ ಕೈದೋರಿಸು ತಿಂತೆಂದು || ೧ ||

|| ರಾಗ: ಸುರುಟಿ. ಏಕತಾಳ ||

ಅರಿಕೇಸರಿ ದೊರೆಯೆ । ಕಣ್ಣನು । ಹೊರಳಿಸಿ ಗುಣಮಣಿಯೆ || ಮೆರೆವೀವನಗರ್ಭದಿ ಗುಡಿ ಶಿಶುವೊಂ । ದಿರುವುದು ಕಣ್ಮನಕಾಕರ್ಷಕವಿದು

॥ ೧ ॥ ಇಂದಿನ ದಿನ ಸುದಿನ । ದರ್ಶನ । ಹೊಂದುವ ಭಾಗ್ಯಧನ ॥ ಬಂದಿಹುದೀ ವನದೊಳಗವತರಿಸಿದ । ಸುಂದರ ದೇಗುಲದೊಳಗಡೆ ನೋಡುವ ॥ ೨ ॥

॥ ರಾಗ: ಸಾಂಗತ್ಯ. ರೂಪಕ ತಾಳ ॥

ಅನುಮೋದಿಸುತ ಶಬರನ ವಾಣಿಯನ್ನಾಗ । ವನದಿ ಸುಶೋಭಿಪ ಗುಡಿಯು ॥ ಘನವೇಗದಿಂದಲಿ ಬಂದು ಹೊಕ್ಕನು ಬೇಡ । ರನು ಕೂಡುತಲಿ ನರರೊಡೆಯು ॥ ೧ ॥ ಕಡುಬೆಡಗಿನ ಕಾಡನಡುವಿನೊಳಡಗಿಹ । ಗುಡಿಯೊಳಗೊಂದು ಲಿಂಗವನು ॥ ಪೊಡವಿಪಾಲಕ ನೋಡಿ ಶಬರಗೆ ತೋರಿಸು । ತೊಡನೆ ತಾನಿಂತರುಹಿದನು ॥ ೨ ॥

॥ ರಾಗ: ಕೇದಾರ ಗೌಳ. ಅಷ್ಟ ತಾಳ ॥

ಬೇಡರವನೆ ಕೇಳು ಈ ಲಿಂಗಪೂಜೆಯು । ಮಾಡಲು ಗೃಹದೊಳಗೆ ॥ ಗಾಢ ಭಕ್ತಿಗೆ ಮೋಕ್ಷಲಕ್ಷ್ಮಿಯು ಮೈದೋರಿ । ನೀಡುವ ಶಿವ ನಿನಗೆ ॥ ೧ ॥ ಹೇಗೆ ಅರ್ಚಿಸಲಿ ಮೆಚ್ಚಿಸಲೆಂದು ತಿಳಿಯೆನು । ನಾಗಭೂಷಣನ ನಾನು ॥ ಬೇಗನೆ ತಿಳಿಸಿ ಕೃತಾರ್ಥನ ಮಾಡಲು । ಹಾಗೆಯೆ ನಡೆಯುವೆನು ॥ ೨ ॥ ಪರಶಿವನಿಗೆ ಹೊಸತಾದ ಚಿತಾಭಸ್ಮ । ತರುತರ್ಪಿಸು ನಿತ್ಯದಿ ॥ ಶಿರಕೇರಿಸುತ ಬಿಲ್ವದಳಗಳ ನೈವೇದ್ಯ । ವಿರಿಸುತರ್ಚಿಸು ಮುದದಿ ॥ ೩ ॥ ಧನ್ಯನಾದೆನು ಜಗದೊಡೆಯನೆ ಲಿಂಗವ । ನನ್ಯಭಕ್ತಿಯೊಳರ್ಚಿಪೆ ॥ ಪುಣ್ಯ ಉಮೇಶನ ಚಿಂತನೆಯಲಿ ದುಷ್ಟ । ಜನ್ಮಪಾವನಗೊಳಿಪೆ ॥ ೪ ॥

॥ ಕಂದ ॥

ಸಂತಸದಾಳುತ ಶಬರನು । ನಂತರ ಬೇಟೆಯ ಮುಗಿಸುತ ಲಿಂಗವ ಪಿಡಿದುಂ ॥ ಸ್ವಂತಬಿಡದಿಗಾಗಮಿಸಲು । ಕಾಂತಾಮಣಿ ಶಬರಿಯು ಇದನರಿಯುತಲಾಗಳ್ ॥ ೧ ॥

॥ ರಾಗ: ಶಂಕರಾಭರಣ. ಅಷ್ಟತಾಳ ॥

ಬಂದಳು ನಲ್ಲನ ಬಳಿಗೆ । ಸುರ । ಸುಂದರಿ ಆರತಿ ಬೆಳಗೆ ॥ ಕಂದರ್ಪ ನರಗಿಣಿಯಂತೆ । ಅಂದ । ಚೆಂದವೊಪ್ಪುವ ರೂಪವಂತೆ ॥ ಮುದ ।

ದಿಂದ ಚಿಗರೆಗಣ್ಣಿ । ನಂದದಿ ಕಣ್ಣುಳ್ಳ । ಮಂದಹಾಸದ ಅರವಿಂದಾಲಯೆಯು ತೆರ ॥ ೧ ॥ ಎಲೆಗಳ ವಸ್ತ್ರಗಳುಟ್ಟು । ಚೆಲ್ವ । ಗುಲುಗುಂಜಿ ಸರಗಳ ತೊಟ್ಟು ॥ ಹೊಳೆಹೊಳೆಯುಲು ತನುಕಾಂತಿ । ಮೊಗ । ದಲಿ ನರ್ತಿಸಿರೆ ಚಿರಶಾಂತಿ ॥ ಹರಿ । ವೊಲು ಬಡಿನಡುವುಳ್ಳ । ಕಳಕೀರ ವಾಣಿಯು । ಮೆಲುನಡಿಗೆಯೊಳತಿ ಚೆಲುವೆಯು ಅಮಲೆಯು ॥ ಬಂದಳು ॥ ೨ ॥

॥ ಭಾಮಿನಿ ॥

ಹೇಳಲಾರದ ಹರ್ಷದಲಿ ಪತಿ । ಕಾಲಿಗೆರಗುತಲಾಗ ವರ ಸತಿ । ಬಾಳರನ್ನಗೆ ಮಂಗಳಾರತಿ ಬೆಳಗಿದಳು ಗರತಿ ॥ ನೀಲಕಂಠನ ಲಿಂಗ ಕಂಡತಿ । ತಾಳಿ ವಿಸ್ಮಯವನ್ನು ಆ ರತಿ । ಕೇಳಿದಳು ಆದ್ಯಂತ ಸಂಗತಿ ಬರಲತುಳ ಭರತಿ ॥ ೧ ॥

॥ ರಾಗ: ಅಹೇರಿ. ಅಷ್ಟತಾಳ ॥

ಹೃದಯೇಶ್ವರನೆ ಲಾಲಿಸೊ । ಸಂಶಯಗಳ । ಮುದದಿಂದ ಪರಿಹರಿಸೊ ॥ ಸದಮಲಾಂತಃಕರಣ । ದಲಿ ಭಜಿಸೆ ಮುಕ್ತಿ । ಪದವನೀಯುವ ಲಿಂಗ । ವಿದು ಹೇಗೆ ದೊರಕಿತು ॥ ಹೃದಯೇಶ್ವರ ॥ ೧ ॥

॥ ರಾಗ: ಕೇದಾರಗೌಳ. ಝಂಪೆತಾಳ ॥

ಎನ್ನರಸಿ ಕೇಳುಕೇಳೆ । ಸಂತೋಷ । ವನ್ನೀಗ ತಾಳು ತಾಳೆ ॥ ರನ್ನೆ ಘೋರಾರಣ್ಯದಿ । ಕರುಣಿಸಿದ । ಘನ್ನ ಪರಶಿವನು ದಯದಿ ॥ ೧ ॥

॥ ರಾಗ: ಅಹೇರಿ ಅಷ್ಟತಾಳ ॥

ಶಿವಪೂಜೆಗೇನು ಬೇಕು । ಪ್ರಾಣೇಶ ಹೇಳು । ಶಿವಪೂಜೆಗೇನು ಬೇಕು ॥ ಭವಭಯದೂರನ । ರವಿಕೋಟಿ ತೇಜನ । ದಿವಿಜಾದಿ ವಂದ್ಯನ । ಭುವಿಪಾಲಕನ ವರ ॥ ಶಿವಪೂಜೆ ॥ ೧ ॥

॥ ರಾಗ: ಕೇದಾರಗೌಳ. ಝಂಪೆತಾಳ ॥

ನೂತನ ಚಿತಾಭಸ್ಮವು ! ಬಿಲ್ವದಳ । ವೀತನಿಗೆ ಬಹಳ ಪ್ರಿಯವು ॥ ನಾಥೆ ಕೇಳ್ ನೈವೇದ್ಯವ । ನೀಯುತಲಿ । ಭೂತೇಶನನು ಭಜಿಸುವ ॥ ೧ ॥

॥ ವಾರ್ಧಕ ॥

ಎಡೆಬಿಡದೆ ನೂತನ ಚಿತಾಭಸ್ಮ ಹಣೆಗಿರಿಸಿ । ಅಡಿಗಡಿಗೆ ಬಿಲ್ವದಳದ ವೃತವೃಷ್ಟಿಯು ಸುರಿಸಿ । ಕಡಲಂತೆ ಗಂಭೀರ ಘೋಷದಿಂದ ಹಗಲಿರುಳು ಜಪಿ ದ ನಮಶ್ಶಿವಾಯ ॥ ಒಡಲೊಳೀರೇಳು ಜಗವೊತ್ತವನ ಸನ್ಮೂರ್ತಿ । ಕುಡಿಯೊಡೆಯಿತಾ ಬೇಡರವರ ಹೃನ್ಮಂದಿರದಿ । ಪೃಡನಿಗರ್ಪಿಸಿ ಭಕ್ತಿ ನೈವೇದ್ಯ ನಡಿಯುತೊಡಗಿದ ಓಂ ನಮಶ್ಶಿವಾಯ ॥ ೧ ॥

॥ ರಾಗ: ಸೌರಾಷ್ಟ್ರ—ತ್ರಿವಿಡೆ ತಾಳ ॥

ಇತ್ತಲೊಂದಿನ ಬೆಳ್ಳಿಬೆಟ್ಟದಿ । ಉತ್ತಮೋತ್ತಮ ಪರಶಿವನು ತಾ । ನಿತ್ತನೊಡ್ಡೋಲಗವ ಗಣಗಳ । ಮೊತ್ತದಿಂದ ॥ ೧ ॥ ಸುರರು ಆಗಸದಿಂದ ಹೂಮಳೆ । ಗರೆಯುತಿರಲಾ ದೇವದೇವನು ಗಿರಿಜೆಯಿಂದೊಪ್ಪಿದನು ಹರಿವಿ । ಷ್ಟರದಿ ಕುಳಿತು ॥ ೨ ॥ ಮುಕ್ತಕಂಠದಿ ಸಪ್ತಮುನಿಗಳು । ಭಕ್ತಕೋಟಿಯ ಪಾಲಕನ ಅ । ತ್ಯುಕ್ತಿಯಿಂದಲಿ ಪೊಗಳುತಿದ್ದರು । ಭಕ್ತಿಯಿಂದ ॥ ೩ ॥ ಭೃಂಗಿ ತಾಂಡವನರ್ತನವ ಸ । ರ್ವಾಂಗವಿನ್ಯಾಸದಲಿ ಮಾಡಿರೆ । ಕಂಗಳಿಗೆ ರಸದೂಟ ಪಡೆದನು । ಅಂಗಜಾರಿ ॥ ೪ ॥

॥ ಭಾಮಿನಿ ॥

ಹರನು ಕೈಲಾಸಾಚಲದಿ ತಾ । ಮೆರೆಯುತಿರೆ ಸುರಮುನಿಯು ಬರುತಲಿ । ಪರಶಿವ ಭವಾನೀ ವರನ ಪದನಳಿನಯುಗಕೆರಗಿ । ಪರಿಪರಿಯಲಿ ಜಟಾಧರನ ಶುಭಕರ ಮಹಾತ್ಮೆಯು ಪೊಗಳತೊಡಗಿದ । ಪೆರೆಯನೋಡುತ ಶರಧಿಯೇರುವ ತೆರದಿ ಹರ್ಷದಲಿ ॥ ೧ ॥

॥ ರಾಗ: ಕಾಪಿ—ಏಕ ತಾಳ ॥

ಎಷ್ಟು ಹೊಗಳಲಿ ದೇವ ನಿನ್ನ ಅಪಾರ ಮಹಿಮೆಯನು। ಪನ್ನಗ । ಶ್ರೇಷ್ಠತವಗುಣಗಾನಮಾಡಲ ಹಿಂಜರಿಯುತಿಹನು । ಪರಶಿವ । ಸೃಷ್ಟಿ ಸ್ಥಿತಿ ಲಯ ಮೂಲಕಾರಣನಾದವನು ನೀನು । ಕರುಣಾ । ದೃಷ್ಟಿ ಬೀರ್ಕೆ ಬಾರಿದೋರ್ಕೆ ಭಕ್ತ ಸುರಧೇನು । ಭವ ಸಂ । ಕಷ್ಟಹರ ವಿಶ್ವಂಭರ ತಪೋ। ನಿಷ್ಠ ಕರುಣಾಕರ ಜಟಾಧರ । ಇಷ್ಟದಾಯಕ ರಜತಗಿರಿ ಹರಿ । ವಿಷ್ಟರಾಸನ ಫಾಲಲೋಚನ ॥ ಎಷ್ಟು ॥ ೧ ॥ ಪರಮಪುರುಷನೆ ಲೋಕ

ಜನಕನೆ ಪಾರ್ವತೀವರನೆ । ಶುಭಕರ । ವರಸನಾತನ ಪಾಪಕ್ಷಯಕರ ಸುರನದೀಧರನೆ । ಸುರುಚಿರ । ಚರಣಯುಕ್ತನೆ ಬಗ್ಗದೊವಲುಡೆಯನೆ ಪರಾತ್ಪರನೆ । ಸುಮನೋ । ಹರನೆ ಮಹಿಮಾಸಾಗರನೆ ಗುಣಮಯನೆ ಪುರಹರನೆ ॥ ಅನುಪಮ । ಸುರನರೋರಗ ಕಿಂಪುರುಷ, ಕಿನ್ನರ ಗರುಡ ಗಂಧರ್ವ ಚಾರಣ । ವರದ ಕಮಲಜ ಶ್ರೀಶವಂದಿತ ! ತರಣಿ ಕೋಟಿ ಪ್ರಕಾಶ ಶಂಕರ ॥ ಎಷ್ಟು ॥ ೨ ॥ ನೀಲಕಂಠನೆ ವಿಶ್ವವಂದ್ಯನೆ ಕಾಮ ಮರ್ದನನೆ । ಸುಜನರ । ಪಾಲಕನೆ ಪದ್ಮಾಸನಸ್ಥನೆ ಸ್ಮಿತಮುಖಾಂಬುಜನೆ । ಸಕಲೀ । ರೇಳು ಜಗದೀಶ್ವರನೆ ಪಂಚಾನನೆ ಸುರವರನೆ । ವರ ಮುನಿ । ಬಾಲಸಂರಕ್ಷಕನೆ ಅನಘನೆ ವಿಶ್ವತೋಮುಖನೆ । ಮೂಜಗ । ಪಾಲ ತಾಂಡವಲೋಲ ಸದ್ಗುಣ । ಶೀಲ ಪನ್ನಗಮಾಲ ವರಕರು । ಣಾಲವಾಲಾ ಭೀಳಬಲಯುತ । ಕಾಲಕಾಲಾಮಲ ಮಹೇಶ್ವರ ॥ ಎಷ್ಟು ॥ ೩ ॥

॥ ರಾಗ: ಭೈರವಿ—ಅಷ್ಟತಾಳ ॥

ನಾರದ ಮುನಿಯೆ ಕೇಳು । ನವೀನವಿ । ಚಾರವಿರುವುದೆ ಹೇಳು ॥ ಈರೇಳುಭುವನಗಳಲೆಯುವವನು ನೀನು । ಸಾರಲು ಬಂದುದೇನು ॥ ೧ ॥

॥ ರಾಗ: ಪುನ್ನಾಗ—ಆದಿತಾಳ ॥

ದೇವರ ದೇವನೆ ಲಾಲಿಸಿ ಕೇಳು । ಜೀವನ ಪಾವನ ದೀನದಯಾಳು ॥ ಭೂವರಸಿಂಹಕೇತನ ಸಾಮ್ರಾಜ್ಯದೊಳು ! ಯಾವಾಗಲೂ ನಿನ್ನ ಪುಣ್ಯ ಧ್ಯಾನದೊಳು ॥ ೧ ॥ ಬೇಡನೋರ್ವನು ವನದೊಳಗೆ ಲಿಂಗವನು ॥ ನೋಡುತ ನೂತನ ಚಿತೆಯ ಭಸ್ಮವನು ॥ ಗಾಢಪ್ರೇಮದಿ ಹಚ್ಚಿ ಪೂಜಿಪ ತಾನೆ । ನೋಡಲೀರೇಳು ಜಗದೊಳೆಣೆಗಾಣೆ ॥ ೨ ॥ ಶಿವಶರಣರೊಳಾ ಶಬರನಗ್ರಗಣ್ಯ । ದಿವಿಯಂತೆ ಮೆರೆಯುತಿಲಿದೆ ಕಟ್ಟರಣ್ಯ ॥ ತವಸಿಯ ಹೋಲುವ ರೂಪಲಾವಣ್ಯ । ಭವನೆ ಪರೀಕ್ಷಿಸು ಭಕ್ತಿಯನನ್ಯ ॥ ೩ ॥

॥ ಕಂದ ॥

ಇಂತೆಂದಾ ನಾರದಮುನಿ । ನಂತರ ಹರಿನಾಮವ ನೆನೆಯುತ ತಾ ಪೊರಡಲ್ ॥ ಸಂತಸದಿಂದಗಜೆಯುತಾ । ನಿಂತೆಂದಳು ಪವಳೆಗುತ ವಿಶ್ವಂಭರೆನೊಳ್ ॥ ೧ ॥

॥ ರಾಗ: ಸೌರಾಷ್ಟ್ರ—ಅಷ್ಟತಾಳ ॥

ಮೆಚ್ಚಿದೆ ಶಬರನ ಮುಗ್ಧ ಭಕ್ತಿಯ ನಾನು ! ಪ್ರಾಣಕಾಂತ । ಬಲು ॥
ಅಚ್ಚರಿಹೊಂದಿದೆ ನಿನ್ನ ಯೋಚನೆಯೇನು । ಪ್ರಾಣಕಾಂತ ॥ ೧ ॥

॥ ರಾಗ: ನವರೋಜು—ಅಷ್ಟತಾಳ

ಹರಿಣಲೋಚನೆ ಪ್ರಾಣನಾಥೆ । ಕೇಳು । ವರಹಿಮಗಿರಿರಾಜಜಾತೆ ॥
ಶರಣಕೋಟಿಯು ತಾರೆಗಳ ಮಧ್ಯೆ ಚಂದ್ರನ । ತೆರದಿ ಮಿರುಗುತಲಿರುವ
ಶಬರನಿ । ಗಿರುವ ಭಕ್ತಿಯನೋಡಲೆಳಸಿಹೆ ॥ ಹರಿಣಲೋಚನೆ ॥ ೧ ॥

॥ ರಾಗ: ಸೌರಾಷ್ಟ್ರ—ಅಷ್ಟತಾಳ ॥

ಅವನ ನಿಚ್ಚಳಭಕ್ತಿಗೇನು ಪರೀಕ್ಷೆಯು ! ಪ್ರಾಣಕಾಂತ । ನೀನು ॥
ಜವದಿ ಹೇಳೆನಗೆ ಕೇಳಲು ಬವಲವಿಕೆಯು । ಪ್ರಾಣಕಾಂತ ॥ ೧ ॥

॥ ರಾಗ: ನವರೋಜು—ಅಷ್ಟತಾಳ ॥

ನೂತನ ಚಿತೆಯ ಭಸ್ಮವನು । ದೇವಿ । ಈತನು ದಿನವು ಹಚ್ಚುವನು ॥
ಆತಗೆ ಭಸ್ಮವ ಸಿಗದಂತೆ ಮಾಡಿ ಮ । ಹಾತಿಶಯಭಕ್ತಿಯನು ನಾನು ಕಿ ।
ರಾತನಿಂದಲಿ ಪ್ರಚುರಪಡಿಸುವೆ ॥ ೧ ॥

॥ ರಾಗ: ಭೈರವಿ—ಝಂಪೆತಾಳ ॥

ಇತ್ತ ಶಬರನು ತಾನ । ಹೊತ್ತು ಮೂಡಲು ಭಸ್ಮ । ವಿತ್ತನಪಡೆವ
ಕಾ । ರ್ಯಾರ್ಥ ಹೊರಹೊರಟ ॥ ೧ ॥ ಶೋಧನೆಯ ನಡೆಸಿ ಹೊಸ ।
ತಾದ ಭಸ್ಮವನು ॥ ಸಾಧಿಸದೆ ಅತ್ಯಂತ । ವೇದನೆಯ ತಾಳಿದ ॥ ೨ ॥
ತಿರುತಿರುಗಿ ಮನೆಯೆಡೆಗೆ । ಬರುತಲೆಯಲ್ಲಿ ॥ ಕರವಿರಿಸುತಾಗಬಹು ।
ತೆರದಿ ಶೋಕಿಸಿದ ॥ ೩ ॥

॥ ರಾಗ: ನೀಲಾಂಬರಿ ಆದಿತಾಳ ॥

ಹರನೆ ಏನಮಾಡಲಿನ್ನು । ತೋರಿದೆ ಕರುಣೆ ನೀನು ॥ ಪರಮ
ಪುರುಷ ನಿನ್ನ ಪೂಜೆಗಿರದು ಭಸ್ಮವಯ್ಯೋ ೧ ॥ ಹೊಸತು ಚಿತೆಯ
ಭಸ್ಮ ಕಣ್ಣಿ । ಗೆಸೆವುದನ್ನು ಕಾಣೆ ॥ ಹಸಿದ ನಿನಗೆ ಭಸ್ಮದಶನ । ವೆಸಗು

ಲೀಗ ಸಾಧ್ಯ ॥ ೨ ॥ ನೋರೆಯೆತ್ತಲಾರೆ ಭಸ್ಮ । ನೀರಮೇಲೆ ಹೋಮು ॥ ಬಾರಿ ತೋರೊ ದೇವದೇವ । ಓಂ ನಮಃಶ್ಶಿವಾಯ ॥ ೩ ॥

॥ ಭಾಮಿನಿ ॥

ಸಿರಿಮೊಗವು ಬಾಡಿರುವ ಹೂವಿನ । ತೆರದೊಳಿರಲರ್ಧಾಂಗಿ ಶಬರಿಯು । ಬರುತ ಪತಿದೇವನ ಚರಣಕಮಲಗಳಿಗೆರಗುತಲಿ । ಸುರಿವ ಕಣ್ಣೀರನ್ನು ದುಗುಡದೊ । ಳುರಿವ ತನುವನು ನೋಡಿ ಪ್ರಾಣೇ । ಶ್ವರನಿಗೆಂದಳು ಮನದಳಲು ಏನೆಂಬುದನು ತಿಳಿಯೆ ॥ ೧ ॥

॥ ರಾಗ: ಕೇದಾರ ಗೌಳ-ಆದಿತಾಳ ॥

ಜೀವಿತೇಶನೆ ಏಕಿಷ್ಟು ಚಿಂತೆ । ಯಾವುದಾದರೂ ಕಷ್ಟವು ಬಂತೆ ॥ ಪಲ್ಲ ॥ ಮೊಗದಾವರೆಯು ಕಂದಿಕುಂದಿಹುದಿಂದು । ಹೊಗೆಯಾಡುತಿರುವದ ಶಾಂತಿಯು ನೊಂದು ॥೧॥ ಅತಿಶಯ ದುಃಖದ ಮೂಲಕಾರಣವ । ಪತಿದೇವ ಹೇಳೀಗ ತಾಳುತ ಮುದವ ॥ ೨ ॥

॥ ರಾಗ: ಮಧುಮಾಧವಿ-ಏಕತಾಳ ॥

ಮನದಳಲನು ಪ್ರಿಯತಮೆ ಈಗ ಕೇಳೆ । ಮುನಿದಿಹ ಪರಮಾತ್ಮ ಶಿವನೆಮ್ಮ ಮೇಲೆ ॥ ೧ ॥ ಈಶ್ವರನಿಗೆ ಭಸ್ಮ ದೊರಕದೆ ಹೋಯ್ತು । ವಿಶ್ವಪ್ರಯತ್ನವು ನಿಷ್ಫಲವಾಯ್ತು ॥ ೨ ॥ ನನ್ನ ದೇವರಿಗುಪವಾಸವನಿತ್ತೆ । ಇನ್ನಿಲ್ಲವಂತಹ ಪಾಪವ ಹೊತ್ತೆ ॥ ೩ ॥

॥ ರಾಗ: ಸಂವಾದ ॥

ಮೂಕರೋಧನವನು ಮಾಡು । ಶೋಕ ಕುಳಿತೆ ಪ್ರಾಣಕಾಂತ ಸಾಕು ಮಾಡು ಹೊಳೆಯುತಿಹುದು । ಏಕೆ ಯೋಚನೆ ॥ ೧ ॥ ಬಾಳದೇರಗಾಲಿ ದೇವಿ । ಕೇಳಲೀಗಲುತ್ಸುಕತೆಯು । ತಾಳಿರುವುದು ನನ್ನ ಮನವು । ಹೇಳು ಬೇಗನೆ ॥ ೨ ॥ ಖಿನ್ನನಾಗಬೇಡ ಕಾಂತ । ನನ್ನದೇಹದಿಂದ ನೀನು । ತ್ವನ್ನ ಭಸ್ಮಪಡೆದು ಹುಚ್ಚು । ಘನ್ನ ಲಿಂಗಕೆ ॥ ೩ ॥ ಅಗಲಾರದಂಥ ಮಾತು । ನೀಗಿ ದೇಹವನ್ನು ಭಸ್ಮ । ವಾಗಿ ಬರಲು ನನ್ನ ಬಾಳು । ಹೇಗೆ ಕಳೆವುದು ॥ ೪ ॥ ದೇಹ ನಶ್ವರವಿದು ಸ್ವಾಮಿ । ಮೋಹದೊರೆದು ಸಕಲ

ವಿಶ್ವ | ಗಾಹಿ ದೇವಗೀವೆ ನನ್ನ | ಹೇಯುತನುವನು || ೩ || ಮನುಜಳಲ್ಲ ದೇವಿನೀನು | ವನದೊಳಿರುವ ಬೇಡಪಡೆಗೆ | ಘನತೆಯನ್ನು ಕೊಡಲಿಕಾಗಿ | ಜನುಮದಾಳಿದೆ || ೬ || ಹೊಗಳುನುಡಿಯು ಸಾಕು ಗೃಹದಿ | ತೆಗೆಯು ತಗ್ನಿಕುಂಡವನ್ನು | ಮುಗುಳುನಗುತ ಪ್ರಾಣವನ್ನು | ಸೊಗದಿನೀಗುವೆ ||೭||

|| ರಾಗ: ಮಧುಮಾಧವಿ—ತ್ರಿವಿಡಿ ತಾಳ ||

ಎಂದು ಗೃಹದಲಿ ಚಿತೆಯುಗೈಯ್ದಾ | ನಂದದಿಂದಲಿ ನಗುತ ಭಸ್ಮವ | ಹೊಂದಿದಳು ಶಿವಧ್ಯಾನದಲಿ ತಾ | ವಿಂದು ಅಗ್ನಿಪ್ರವೇಶದಿ || ೧ || ತಡೆ ಹಿಡಿದು ದುಃಖವನು ಶಬರನು | ಒಡನೆ ನೂತನ ಚಿತೆಯ ಭಸ್ಮವ | ಪ್ಪಡನ ಲಿಂಗಕೆ ಹಚ್ಚಿಪೂಜೆಯ | ಕಡಲಿನಲಿ ತಾ ಮುಳುಗಿದ || ೨ ||

|| ವಾರ್ಧಕ ||

ಹರಹರ ಮಹಾದೇವ ಪುರಹರ ಸುರುಚಿರ ಶುಭ | ಕರ ಭವಾನಿ | ವರ ಜಟಾಧರ ಚರಾಚರ ನಿ | ಕರವಂದ್ಯ ಓಂ ನಮೊ | ಭಗವತೇ ಪರ ಮೇಶ್ವರಾಯ ಕರುಣಾಸಾಗರ || ಸ್ಮರಹರಾಮರನದೀಧರ ಪರಾತ್ಪರ ಗುಣಾಕರ ದಿಗಂಬರ ಭಕ್ತವತ್ಸಲಜಯತುಜಯತು | ವರದರಜತಾದ್ರೀಶ ಲೋಕೇಶನಂದೀಶದೇವೇಶ ವಿಶ್ವಂಭರ || ೧ ||

|| ಕಂದ ||

ಈ ಪರಿಯಿಂದಲಿ ಶಬರನು | ಆ ಪುರಹರನನು ಪೂಜಿಸುತಿರಲಾ|| ತಾ ಪವನೋಡುತ ಗಿರಿಜೆಯು| ತಾ ಪತಿದೇವನ ಅಡಿಗಳಿಗೆರಗುತಲೆಂದಳ್ ||೨||

|| ರಾಗ: ರೇಗುಪ್ತಿ—ಅಷ್ಟತಾಳ ||

ಕರುಣಾಳು ದಯೆದಾಳುಕಾಂತ | ದೇವ | ಪುರಹರಕಾಲಕೃತಾಂತ || ಚರಣದಾಸಿಯು ಭಸ್ಮವನು ಹಚ್ಚಿಲಿಂಗವ | ಪರಮಭಕ್ತಿಯೊಳಿಹ ಮರಿ ತೀಗ ನನೆಯುವ || ೧ ||

|| ರಾಗ: ಪುನ್ನಾಗ—ಏಕತಾಳ ||

ದೇವಿ ಲಾಲಿಸು ಹೈಮವತಿ ವರ ಸುದತಿ | ಜೀವದಾನವ ಪಡೆವಳು ಶಬರ ಸತಿ || ಪಲ್ಲ || ತರುಣಿ ಶಿರೋಮಣಿ ಶಬರನ ಮಡದಿ | ತೊರೆದು

ಳಸುವ ಭಸ್ಮಕೋಸುಗ ಮುದದಿ ‖ ಮರೆತು ಕಿರಾತನು ತುಂಬುಹೃದಯದಿ । ನೆರೆಬಕುತಿಯೊಳರ್ಚಿಸುವನೀಗ ವಿಧದಿ ‖ ೧ ‖ ಪರಿಪೂರ್ಣಮಾಗಿಸಲು ಪೂಜೆಯನವನು । ತ್ವರೆಯಿಂದ ನೈವೇದ್ಯತರಲು ಹೇಳುವನು ‖ ಕರೆಯ ಕೇಳುತ ಶಬರಿಯು ನೈವೇದ್ಯವನು । ತರುವಳು ಹೋಗುತಲಿ ಪುನರ್ಜನ್ಮವನು ‖ ೨ ‖

‖ ಭಾಮಿನಿ ‖

ಹರನಲಿಂಗಕೆ ಭಸ್ಮಹಚ್ಚುತ । ಶಿರಕೆ ಬಿಲ್ವದಳಗಳನಿರಿಸುತ । ಪರಮಚಂದನವನ್ನು ಹಣೆಯುದ್ದಕ್ಕೆ ತಾನಿಡುತ ‖ ತರುಣಿ ಶಬರಿಯು ಭಸ್ಮವಾಗುತ । ಮರಣಹೊಂದಿದನ್ನು ಮರೆಯುತ । ಕರೆದನೀಪರಿಯಲ್ಲಿ ನೈವೇದ್ಯವನು ತಾರೆನುತ ‖ ೧ ‖

‖ ರಾಗ: ಸಾರಂಗ-ಆದಿತಾಳ ‖

ಮಡದಿಯೆ ಬಾರೆಬಾರೆ । ನೈವೇದ್ಯವ । ನೊಡನೀಗ ತಾರೆ ತಾರೆ ‖ ಮೃಡನು ಹಸಿವೆಯನ್ನು । ತಡೆಯಲಾರನು ನೀನು । ತಡಮಾಡದಿರು ಸುರ। ರೊಡೆಯನಿಗರ್ಪಿಸೆ ‖ ಮಡದಿಯೆ ‖ ೧ ‖ ಎಂದ ಮಾತನು ಕೇಳುತ । ಪೊಸತುದೇಹ । ವಂದು ಶಬರಿ ತಾಳುತ ‖ ಬಂದೆನು ಪ್ರಾಣೇಶ । ಎಂದು ಓ ಗೊಡುತಲಿ । ತಂದಿಟ್ಟಳಾಗ ನೈವೇದ್ಯವ ಬಳಿಯಲಿ ‖ ೨ ‖

ಕಂದ

ಪರಶಿವನಿಗೆ ನೈವ್ಯೇದ್ಯವ । ಹರುಷದ ಕಡಲೊಳು ಮುಳುಗುತೆ ಶಬರನೆಸಗುತಂ ‖ ಗಿರಿಜಾತೆ ವಲ್ಲಭ ಪರನೋ ! ಶ್ವರನಿಗೆ ರುಚಿರಾರತಿ ಬೆಳಗಿದನಾಗಳ್ ‖ ೧ ‖

‖ ರಾಗ: ಕಮಾಚು-ಅಷ್ಟತಾಳ ‖

ಎತ್ತಿದನಾರತಿಯ । ಮಹೇಶಗೆ । ಎತ್ತಿದನಾರತಿಯ । ಪೃಥ್ವಿಗಳೇಳು । ಹೊತ್ತು ತನ್ನುದರದಿ । ನಿತ್ಯ ದೇವತೆಗಳ ನೊತ್ತವ ಪೊರೆವಗೆ ‖ ಎತ್ತಿದ ‖ ೧ ‖ ಅಣುರೇಣುತೃಣಕಾಷ್ಠದಿ । ವಾಸಿಸುವಂಥ । ಗಣನಾಯ

ಕಗೆ ಮುಂದದಿ । ತನುಮನಧನವ ಸಮರ್ಪಣೆ ಮಾಡುತ । ಘನ ಬೆಳ್ಳಿ ಬೆಟ್ಟ
ದೊಡೆಯ ಪರಶಿವನಿಗೆ ।। ಎತ್ತಿದ ।। ೨ ।।

॥ ರಾಗ: ಶಂಕರಾಭರಣ ತ್ರಿವಿಡೆತಾಳ ॥

ಬಳಿಕ ಶಬರನು ಮಂಗಳಾರತಿ । ಬೆಳಗಿಸತಿಯನು ನೋಡಲು ॥
ಹೊಳೆಯಿತಾಗವಳಗ್ನಿಕುಂಡದೊಳಳಿದು ಹೋಗಿಹಳೆಂಬುದು ।। ೧ ।।
ಎನ್ನರಸಿ ನೀನೆಂತು ನೂತನ । ಜನ್ಮದಿಂದವತರಿಸಿಪೆ ।। ನನ್ನ ಕಣ್ಣನು
ನಾನೆ ನಂಬಲು । ಬನ್ನ ಬಡುವೆನು ಎಂದನು ।। ೨ ।। ಕೇಳು ವಲ್ಲಭ
ನಾನು ಆ ಶಿವ । ಲೀಲೆಯಿಂದಲಿ ಬದುಕಿದೆ ॥ ಫಾಲಲೋಚನನನ್ನು ಸಂತಸ ।
ದಾಳಿ ಭಜಿಸುವ ಎಂದಳು ।। ೩ ।।

॥ ವಾರ್ಧಕ ॥

ಹರ! ಜಟಾಧರ! ದಿಗಂಬರ ! ಪರಾತ್ಪರ! ಮನೋ। ಹರ। ಗುಹಾಕರ ।
ಸುರಾಗ್ರೇಸರ! ಮಹಾಪಾಪಹರ । ಚಂದ್ರಶೇಖರಾಮರನ ದೀಧರ ! ನಿರ್ವಿ
ಕಾರ ವಿಶ್ವಂಭರ ।। ಹರ! ದಯಾಪರ! ಚರಾಚರನಿಕರವಂದ್ಯ! ಪುರ । ಹರ
ಜೀತೇಂದ್ರಿಯ ನಿರಾಮಯ ಸನಾತನ! ಕಾಮ । ಹರ । ಪನ್ನಗಾಭರಣ ।
ಪಾಹಿ ಜಯ ಜಯವರದ ದೇವಾಧಿದೇವ ಶಂಭೋ ।। ೧ ।।

॥ ಕಂದ ॥

ಪರಶಿವನಿ । ಧ್ಯಾನವನವ । ಧರಿಸುತಲಿಂಗದೊಳವತರಿಸಿದನಾಕ್ಷಣ
ದೋಳ್ ।। ಶರಣರ ಮೇಲತಿ ಕರುಣೆಯ । ಸುರಿಸುತಲಿಂತೆಂದನು ಶಬ
ರಗೆ ಸಂತಸದೋಳ್ ।। ೨ ।।

॥ ರಾಗ: ನವರೋಜು ಏಕತಾಳ ॥

ಮೆಚ್ಚಿದೆ! ಮೆಚ್ಚಿದೆ! ಶಬರ । ನೀ । ಅಚ್ಚುಮೆಚ್ಚಿನ ಕುವರ ।। ಹೆಚ್ಚಿನ
ಭಕ್ತಿಗೆ ಅಚ್ಚರಿ ಹೊಂದಿದೆ । ಸಚ್ಚರಿತನೆ ಒಲುಮೆಯನಿದೊ ನೀಡಿದೆ ।। ೧ ।।
ನಿಸ್ಸೀಮೆಯಿಲ್ಲದ ಭಕ್ತಿ । ಜನ । ಕಿನ್ನದುವೆ ಮೇಲ್ಪಂಗ್ತಿ ।। ಇನ್ನಿಲ್ಲದ ಸೊಗ
ಸೊದೆಯನು ಸವಿಯುತ ನನ್ನಯ ಲೋಕಕೆ ಬಾರೈ ಎಲೆಸುತ ।। ೨ ।।